<u>ಅಸಲು ದಾವಾ ಸಂಖ್ಯೆ- **135/2018**</u> ಪಿ.ಡಬ್ಲ್ಯೂ:- **1**

ದಿನಾಂಕಃ **12-03-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ಅಸಲು ದಾವಾ ಸಂಖ್ಯೆ 110/2013 ದಾವೆಯಲ್ಲಿ ಮೊದಲಿಗೆ ಗುಡ್ಡಪ್ಪ ವಕೀಲರನ್ನು ನೇಮಕ ಮಾಡಿಕೊಂಡಿದ್ದೆವು. ತದನಂತರ ಈಗ ಬೇರೆ ವಕೀಲರನ್ನು ನೇಮಕ ಮಾಡಿಕೊಂಡಿದ್ದೇವೆ. ಸದರಿ ದಾವೆಯಲ್ಲಿ ಗುಡ್ಡಪ್ಪ ವಕೀಲರು ನಮ್ಮ ಪರವಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದರು. ಅಸಲು ದಾವಾ ಸಂಖ್ಯೆ 110/2013 ರ ನನ್ನ ಪ್ರತಿವಾದ ಪತ್ರದಲ್ಲಿ ಪ್ಯಾರಾ ನಂ.7 ರಲ್ಲಿ ಸದರಿ ದಾವೆಯ ವಾದಿಯು ದಾವಾ ಆಸ್ತಿಯಲ್ಲಿ ಅಂದರೆ ಕಣದಲ್ಲಿ ಬಣವೆ ಮತ್ತು ವ್ಯವಸಾಯ ಸಾಮಾಗ್ರಿಗಳನ್ನು ಹಾಕಿಕೊಂಡು ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 110/2013 ರಲ್ಲಿ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಸಾಕ್ಷಿಯು ಮುಂದುವರೆದು ಬೆರಳಚ್ಚಿನ ತಪ್ಪಿನಿಂದಾಗಿ ಬೆರಳಚ್ಚಾಗಿದೆ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ಕನ್ನಡದಲ್ಲಿ ಬರವಣಿಗೆ ಆಗಿದೆ ಎಂದರೆ ಸರಿ. ವಕೀಲರು ಪ್ರತಿವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನನಗೆ ಓದಿ ಹೇಳಿದ್ದರು ಆದರೆ ನನಗೆ ಸರಿಯಾಗಿ ಅರ್ಥವಾಗಿರುವುದಿಲ್ಲ. ಪ್ರತಿವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರವನ್ನು ತಿದ್ದುಪಡಿ ಕೋರಿ ಅರ್ಜಿ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ವಕೀಲರು ಪ್ರತಿವಾದ ಪತ್ರದ ತಿದ್ದುಪಡಿ ಕೋರಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ವಕೀಲರು ಸಲ್ಲಿಸಿದ ತಿದ್ದುಪಡಿ ಅರ್ಜಿಯು ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ತಿದ್ದುಪಡಿ ಅರ್ಜಿಯು ವಜಾಗೊಂಡ 2-3 ವರ್ಷಗಳ ನಂತರ

ಗೌ.ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇವೆ ಎಂದರೆ ಸರಿ. ಗೌ.ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ "ವಾದಿಯು ದಾವಾ ಆಸ್ತಿಯಲ್ಲಿ ಅಂದರೆ ಕಣದಲ್ಲಿ ಬಣಿವೆ ಮತ್ತು ವ್ಯವಸಾಯ ಸಾಮ್ಗ್ರಾಗಿಗಳನ್ನು ಹಾಕಿಕೊಂಡು ಉಪಯೋಗಿಸುತ್ತಿದ್ದಾರೆ" ಎಂಬುದನ್ನು ಹೊರತುಪಡಿಸಿ ಉಳಿದ ತಿದ್ದುಪಡಿಗೆ ನಿರ್ದೇಶನವನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 110/2013 ರಲ್ಲಿ ನಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಪತ್ರದಲ್ಲಿ ಚಕ್ಕುಬಂಧಿ ತಪ್ಪಾಗಿ ನಮೂದು ಮಾಡಿದ್ದು ದಾವಾ ಆಸ್ತಿಯ ಪಶ್ಚಿಮಕ್ಕೆ ಕೋಮಾರನಹಳ್ಳಿ ಬಸಪ್ಪನು ಮಾಡುವ ಕಣ ಎಂಬುದರ ಬದಲಾಗಿ ರಸ್ತೆ ಎಂದು ತಪ್ಪಾಗಿ ನಮೂದಾಗಿದೆ ಎಂದರೆ ಸರಿ. ಸರ್ವೇ ನಂ.2/2 ಎ ರಲ್ಲಿ 22 ಗುಂಟೆ, ಸರ್ವೇ ನಂ.2/2 ಬಿ/ಪಿ2 ರಲ್ಲಿ 20 ಗುಂಟೆ ಜಮಿನಿಗೆ ಒಟ್ಟಾಗಿ 1 ಎಕರೆ 2 ಗುಂಟೆ ಜಮೀನಿಗೆ ಚಕ್ಕುಬಂಧಿ ಪೂರ್ವಕ್ಕೆ ಹಳ್ಳ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ದನುವಿನ ಓಣಿ, ದಕ್ಷಿಣಕ್ಕೆ ಸಾರ್ವಜನಿಕ ರಸ್ತೆ ಎಂದು ಅಸಲು ದಾವಾ ಸಂಖ್ಯೆ 110/2013 ರಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.